Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ೫೧ —

# ಸತ್ಯವಾದಿ
SATYAVADI

ಸ್ಥಾಪಕರು:— ಅರಮನೆ ಸಿಂಸ್ಕೇದಾರ್ ಎಂ. ಎ ಸುಬ್ಬರಾಯುರು [ಬಿಡಿ ಪ್ರತಿ 3 ಪೈ

20—1—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

## ಕೇಂದ್ರ ಮತ್ತು ರಾಜ್ಯ ನೌಕರರನು ಶೀ ಒಂದೇರೀತಿ ಕಾಣಬೇಕು

ಮಂಗಳೂರಿನಲ್ಲಿ ಸಮಾವೇಶವಾಗಿದ್ದ ದಕ್ಷಿಣ ಕನ್ನಡ ನಾರ್ತಗೆಜಿಟೆಡ್ ನೌಕರರ ಸಮ್ಮೇಳನ ನಿರ್ಣಯವನ್ನು ಅಂಗೀಕರಿಸಿ, ವೇತನ ಮತ್ತಿತರ ನೌಕರಿ ಷರತ್ತಿನಲ್ಲಿ ರಾಜ್ಯ ವಿಶ್ವ ಕೇಂದ್ರ ಸರ್ಕಾರಗಳಲ್ಲಿ ಯಾವ ವ್ಯತ್ಯಾಸವು ಇರಕೂಡದೆಂದು ಮೈಸೂರು ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯ ಅಂಗೀಕರಿಸಿದೆ. ಈ ಸಂಘದ ಬೇಡಿಕೆಗಳು ಈಡೇರಲು ಕೈಲಾದುದನ್ನೆಲ್ಲ ಮಾಡುವುದಾಗಿ ಕಾನೂನು ಮಂತ್ರಿ ಶ್ರೀ ಬಿ. ವೈಕುಂಟಬಾಳಿಗರು ಭರವಸೆ ಇತ್ತರು.

### ಬಳಕೆದಾರರ ಸಮ್ಮೇಳನ

ಮುಂದಿನ ಮಾಹೆ 15 ನೆ.ತ್ತು 16 ರಲ್ಲಿ ಅಖಿಲ ಭಾರತ ಬಳಕೆದಾರರ ಸಮ್ಮೇಳನ ನವ ದೆಹಲಿಯಲ್ಲಿ ಸಮಾವೇಶಗಾಗುವುದು ಮುಂದಿನ ಮಂತ್ರಿ ಶ್ರೀ ಮೆಹಂಚಂದ ಖಾನ ಅಧ್ಯಕ್ಷತೆ ವಹಿಸುವರು

### ಸರ್ಕಾರಕ್ಕೆ ಲಾಭ

1961—62 ರ ಮೊದಲ 8 ತಿಂಗಳಿನಲ್ಲಿ ದೆಹಲಿಯ ಅಶೋಕ ಹೋಟೆಲು ರೂ. 21-75 ಲಕ್ಷ ಲಾಭಗಳಿಸಿದೆ.

### ಸತ್ಕಾರ ಕೂಟ

ಸಿಂಹಳ ಪತ್ರಿಕಾ ನಿಯೋಗದ ಗೌರವಾರ್ಥ ಮೈಸೂರು ಪೌರಸಭೆ ನಿನ್ನೆ ದಿನ ಸಂಜೆ ಸತ್ಕಾರಕೂಟವೇರ್ಪಡಿಸಿತ್ತು.

oo

ಫೆಬ್ರವರಿ 1 ರಿಂದ ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ಚುನಾವಣೆ ಬರುವುದು.

ರಷ್ಯಕ್ಕೆ ಬ್ರಿಟಿಷ್ ಪ್ರಧಾನಿ ಮ್ಯಾಕ್ಮಿಲನ್‌ರವರು ಭೇಟಿಕೊಡುವುದಿಲ್ಲವೆಂದು ಖಚಿತ ವಾರ್ತೆ ತಿಳಿಸುತ್ತದೆ.

### ಹಾಲು ಹಣ್ಣು

ಕ್ಷಯರೋಗಿಯೋರ್ವನು ಮಾವಿನ ಹಣ್ಣು ಮತ್ತು ಹಾಲು ಕುಡಿದು ತೂಕವನ್ನು ಪಡೆದ ಅಂಶವನ್ನು ಭಾರತ ಸ್ವಯಂ ಸಮಿತಿಯ ಉಪಾಧ್ಯಕ್ಷರಾದ ಶ್ರೀ ವಿ ಶಂಕರರು ಮೊನ್ನೆ ಬೆಂಗಳೂರು ಲಾಲ್‌ಬಾಗಿನಲ್ಲಿ ತೋಟಗಾರಿಕೆ ಅಭಿವೃದ್ಧಿಯ ಅಧಿಕಾರಿಗಳ ಸಮ್ಮೇಳನವನ್ನು ಉದ್ದೇಶಿಸಿ ಭಾಷಣಮಾಡುತ್ತಾ ತಿಳಿಸಿದರು.

### ಮಿಡತೆಯೊಡನೆ ಘರ್ಷಣೆ

ಜಮ್ಮುವಿನಿಂದ ಬಂದಿರುವ ವಾರ್ತೆಯಂತೆ ಕಡಸನ ವಿರುದ್ಧ ಗೆರಿಯ ಬಳಿ ಮಿಡತೆಯ ಸಣ್ಣ ತಂಡ ಮತ್ತು ಭಾರಿ ನೂರು ಕಾಗೆ ಮತ್ತು ಹದ್ದುಗಳಿಗೆ ಘರ್ಷಣೆಗಳಾದವು. ಸುತ್ತಾದ ಮಿಡತೆ ರಾಜ್ಯದಲ್ಲಿ ಎಲ್ಲಾದರೂ ಕುಳಿತು ಕೊಳ್ಳಲು ಪ್ರವೇಶಿಸಿದಾಗ ಕಾಗೆ ಮತ್ತು ಹದ್ದುಗಳು ಅವನ್ನು ಅಟ್ಟಬಂದವು. ಘರ್ಷಣೆ ಸುಮಾರು 1 ಗಂಟೆ ನಡೆದು ಮಿಡತೆಗಳು ಪಾಕಿಸ್ತಾನದ ಕಡೆ ಹಾರಿದವು.

### ಭಾರತದ ಪತ್ರ

ಗೋವಾ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದ ಪೋರ್ಚುಗೀಸು ಸೇನಿಕರನ್ನು ಮತ್ತು ವಿಶೇಷ ಪ್ರಶ್ನೆ ಬಗ್ಗೆ ಭಾರತ ಸರ್ಕಾರದ ಪತ್ರವನ್ನು ಅಂಬ್ ಗಣರಾಜ್ಯದ ಪ್ರತಿನಿಧಿ ಉಸ್ಮಾನ್ ಅನ್ವರ್ ಪೋರ್ಚುಗೀಸು ವಿದೇಶಶಾಖೆಗೆ ತಲುಪಿಸಿದರೆಂದು ಲಿಸ್ಬನ್ ವಾರ್ತೆ.

× ಉಮೇದುವಾರರಿಗೆ ಗುರುತು ಕೊಡುವ ಸಲುವಾಗಿ ಪಕ್ಷಗಳವರೇ ತಮ್ಮ ಉಮೇದುವಾರರನ್ನು ತಿಳಿಸಬೇಕೆಂದೂ, ಚುನಾವಣಾ ಅಧಿಕಾರಿಗಳಿಗೆ ಅದನ್ನು ಬಿಡಲೂ ಆಗದೆಂದು ತಿಳಿಸಲಾಗಿದೆ.

## ಜಗದ್ಗುರುಗಳಿಗೆ ಬಿನ್ನವತ್ತಳೆ

ಶ್ರೀ ಶೃಂಗೇರಿ ಜಗದ್ಗುರುಗಳವರಾದ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರಿಗೆ ನಿನ್ನೆ ಮೈಸೂರಿನಲ್ಲಿರುವ ಶ್ರೀ ಅಭಿನವ ಶಂಕರಾಲಯದಲ್ಲಿ ಬಿನ್ನವತ್ತಳೆಯನ್ನು ಅರ್ಪಣೆ ಮಾಡಲಾಯಿತು. ಅನುಗ್ರಹ ಭಾಷಣದಲ್ಲಿ ಸರ್ವರೂ ಧರ್ಮಾಚರಣೆ ಮಾಡಬೇಕೆಂದು ನುಡಿದರು

★

ನೇಪಾಳದೊರೆ ಮಹೇಂದ್ರರು ಮತ್ತು ಪಂ|| ನೆಹರು ಸಧದಲೇ ನವದೆಹಲಿಯಲ್ಲಿ ಭೇಟಿ ಮಾಡುವ ಸಂಭವವಿದೆ ಅಪ್ತತೆಯಿಂದ ಪರಸ್ಪರ ವಿಚಾರ ವಿನಿಮಯ ಮಾಡುವುದು. ಭೇಟಿಯ ಉದ್ದೇಶ

ಮೈಸೂರು ಶ್ರೀಕೃಷ್ಣರಾಜೇಂದ್ರ ಸೊಸೈಟಿಯ ಅಧ್ಯಕ್ಷರಾಗಿ ಶ್ರೀ ಟಿ ಎಸ್ ಸುಬ್ಬರಾಯರು, ಉಪಾಧ್ಯಕ್ಷರಾಗಿ ಶ್ರೀ ಕರಿಯಣ್ಣನವರು, ಗೌರವ ಕಾರ್ಯದರ್ಶಿಯಾಗಿ ಶ್ರೀ ಎಂ ಪಿ ಅಲಪ್ಪನವರು ಕಾನೂನು ಸಲಹೆಗಾರರಾಗಿ ಶ್ರೀ ಶ್ರೀ ಕಂಠಶರ್ಮರು ಚುನಾಯಿತರಾಗಿರುವರು.

ಜನವರಿ 12 ಕ್ಕಾಗುವ ಪಕ್ಷಾಹಕ್ಕೆ ನೋಟುಗಳ ಚಲಾವಣೆಯಲ್ಲಿ 21.52 ಕೋಟಿಗಳು ಹೆಚ್ಚಿದೆಯೆಂದು ರಿಜರ್ವ್ ಬ್ಯಾಂಕು ಪ್ರಕಟಣೆ ತಿಳಿಸುತ್ತದೆ.

ಡೆನ್ಮಾರ್ಕಿನ ಪ್ರಧಾನಿ ಕಾಂಪರ್ಮೆಯರಿಗೆ ಭಾರತದ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರವರು ಮೂರು ಮಕ್ಕಳ ಚಲನಚಿತ್ರಗಳನ್ನು ಅರ್ಪಿಸಿದರು.

### ಸಮತೂಕದ ಬಜೆಟ್

ವಾಷಿಂಗ್ಟನ್ 19— ಅಧ್ಯಕ್ಷ ಕೆನಡಿ ಕಾಂಗ್ರೆಸ್ಸಿಗೆ ಸಮತೂಕದ ಬಜೆಟ್ಟನ್ನು ಕಳಿಸಿದರು — ರಕ್ಷಣೆ ಮತ್ತು ಬಹಿರಾಕಾಶ ಪರಿಶೋಧನೆಗಾಗಿ ಶಾಂತಿ ಕಾಲದ ಇತಿಹಾಸದಲ್ಲೇ ಅತಿ ಹೆಚ್ಚು ವ್ಯಯ ಸೂಚಿಸಲಾಗಿದೆ.

### ನೀರಿನ ವ್ಯವಸ್ಥೆ

ವಾಸ್ಕೋಡಿಗಾಮ ಮತ್ತು ವಿಡ ಗೋವಾದಲ್ಲಿ ಭಾನುವಾರದ ವೇಳೆಗೆ ನೀರು ಸರಬರಾಜು ವ್ಯವಸ್ಥೆ ಸರಿಯಾಗುವುದು.

### ಕಂಪಾಗಳಿಂದ ಕೊಲೆ

ಕಟ್ಮಂಡು 18— ಟಿಬೆಟ್ಟಿನ ಕಂಪಾ ದೌರ್ಜನ್ಯರು ಎರಡು ಘರ್ಷಣೆಯಲ್ಲಿ ಚೀನೀ ಸಿಪಾಯಿಗಳನ್ನು ಸುತ್ತುಗಟ್ಟಿ 17 ಮಂದಿಯನ್ನು ಕೊಂದಿರುವರು

### ವಿವಿಧ ವಿಷಯಗಳು

ಮಹಾರಾಷ್ಟ್ರದ ನಾಗ್ಪುರ ಜೆಲ್ಲೆಯಲ್ಲಿ 37 ಕೋಟಿ ಟನ್‌ಗಳಷ್ಟು ಕಲ್ಲಿದ್ದಲು ದೊರೆಯುವ ನಿರೀಕ್ಷೆ ಇದೆ

ಜಗತಾರ್ತ 18— ಸಂಯುಕ್ತ ಅರಬ್ ಅಧ್ಯಕ್ಷ ನಸ್ಸೆರ್ ಇಂಡೋನೇಷಿಯಾಕ್ಕೆ ಪಶ್ಚಿಮ ಇರಿಯನ್ ಮೇಲಿನ ಅದರ ಕೇಳಿಕೆಗೆ ಸಕಲ ಸಹಾಯ ನೀಡುವುದಾಗಿ ಭರವಸೆ ಕೊಟ್ಟಿದ್ದಾರೆ.

ವಿಶ್ವಸಂಸ್ಥೆ 18 — ಭಾರತ-ಪಾಕಿಸ್ತಾನಗಳು, ಕಾಶ್ಮೀರ ವಿಷಯವನ್ನು ರಕ್ಷಣಾ ಸಮಿತಿಯ ಹೊರಗೆ ಚರ್ಚಿಸಬೇಕೆಂದು ಅಮೇರಿಕಾ ಸರಕಾರದ ಇಚ್ಛೆಯಾಗಿದೆ.

### ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣಜೋಯಿಸರಿಂದ

21 ಪುಟಗಳು ನೋಡಿ

### ವಿದ್ಯಾರ್ಥಿಗಳ ಮುಷ್ಕರ

ಮೈಸೂರು 19 — ಸ್ಥಳೀಯ ಜಿ ಸಿ ಎ ಎಂ ವಿದ್ಯಾರ್ಥಿಗಳು ಎಂದಿನಂತೆ ತಮ್ಮ ವಸತಿಗೃಹದಿಂದ 8 ನೆಯ ದಿನವನ್ನು ಸಭ್ಯತೆಯಿಂದ ನಡೆಸಿದರು.

### ಕಡಿದಾಳರ ವಿರುದ್ಧ ಸ್ಪರ್ಧೆ

ಮೈಸೂರು — ಶ್ರೀ ನಂಜುಂಡಶಿವಯೋಗೀಂದ್ರ ಭಗವತ್ಪಾದಾಚಾರ್ಯ ಮಹಾಸ್ವಾಮಿಗಳವರ ಮೂವತ್ತೇಳನೆಯ ವಾರ್ಷಿಕ ದಿನಾಚರಣೆಯು ತಾ|| 17 ರಿಂದ 22 ರ ವರೆಗೆ ನಡೆಯುವಂತೆ ಏರ್ಪಾಟಾಗಿದೆ

### ವಾರ್ಷಿಕ ಸಭೆ

ಮೈಸೂರು 19 — ನಾಳೆ ಬೆಳಿಗ್ಗೆ 10 ನೆ ಗಂಟೆಗೆ ಶ್ರೀ ವಾಸವೀ ನಿಲಯದಲ್ಲಿ ಮೈಸೂರು ಜಿಲ್ಲಾ ವರ್ತಕ ಸಂಘದ 18 ನೆಯ ವಾರ್ಷಿಕೋತ್ಸವವು ನಡೆಯುವುದು ಸಂಘದ ಅಧ್ಯಕ್ಷರಾದ ಶ್ರೀ ಆರ್ ಎಸ್. ನಾಗಪ್ಪಶೆಟ್ಟರು ಅಧ್ಯಕ್ಷತೆ ವಹಿಸುವರು.

### ಭಾರತದ ದಾನಾ

ನವ ದೆಹಲಿ 19 — ಉತ್ತರ ಸುಮಾತ್ರದಲ್ಲಿರುವ ವಿಶ್ವವಿದ್ಯಾನಿಲಯಕ್ಕೆ ಭಾರತ ಸರ್ಕಾರದವರು 71 ಗ್ರಂಥಗಳನ್ನು ಕೊಟ್ಟಿದ್ದಾರೆ.

### ಸೂಪರಿಂಟೆಂಡೆಂಟರ ಸಭೆ

ನವ ದೆಹಲಿ 19 — ಜನಗಣತಿ ಸೂಪರಿಂಟೆಂಡೆಂಟರುಗಳು ಫೆಬ್ರವರಿ 1 ರಿಂದ ವಾರ ಇಲ್ಲಿ ಸಮಾವೇಶಗೊಳ್ಳುವರು ಜನಗಣತಿಯ ಸಮಯದಲ್ಲಿ ಸಂಗ್ರಹಿಸಿದ ಅಂಕಿ ಅಂಶಗಳನ್ನು ಪಟ್ಟಿಗಳು ಅಥವಾ ಕೋಷ್ಟಕಗಳ ರೂಪದಲ್ಲಿಡುವ ಕೆಲಸ ಎಷ್ಟರಮಟ್ಟಿಗೆ ನಡೆದಿದೆ ಎಂಬುದನ್ನು ಪರಿಶೀಲಿಸಲು ಈ ಸಭೆ.

### ವಿದ್ಯಾರ್ಥಿ ವೇತನ

ಮೈಸೂರು 19 — ಲೇಬರು ಕಮಿಷನರ ಅಧ್ಯಕ್ಷತೆಯಲ್ಲಿ ಕಾಫಿ ಬೋರ್ಡಿನ ಲೇಬರು ಅಭಿವೃದ್ಧಿ ನಿಧಿ ಧರ್ಮದರ್ಶಿಗಳ ಸಭೆ ಸೇರಿದ್ದಿತು ಪ್ರಾಥಮಿಕ ಶಾಲೆಗೆ ತಿಂಗಳೊಂದಕ್ಕೆ ರೂ 5, ಸೆಕೆಂಡರಿ ಶಾಲೆಗೆ ತಿಂಗಳೊಂದಕ್ಕೆ ರೂ 10, ಡಿಪ್ಲೊಮಾಕ್ಕೆ ಮತ್ತು ಪ್ರಿ-ಯೂನಿವರ್ಸಿಟಿಗೆ ತಿಂಗಳಿಗೆ ರೂ 18 ಡಿಗ್ರಿಗೆ ತಿಂಗಳಿಗೆ ರೂ 25 ಮತ್ತು ಉದ್ಯಮ ಶಿಕ್ಷಣಕ್ಕೆ ರೂ 35 ವಿದ್ಯಾರ್ಥಿವೇತನ ಕೊಡುವ ನಿರ್ಧಾರವಾಗಿದೆ. 142 ಅರ್ಜಿಗಳು ಪರಿಶೀಲನೆಗೆ ಬಂದಿದ್ದವು

### ಕಡಿದಾಳರ ವಿರುದ್ಧ ಸ್ಪರ್ಧೆ

ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರ ವಿರೋಧವಾಗಿ ಕೊಪ್ಪ ಶೃಂಗೇರಿ ವಿಧಾನಸಭೆ ಕ್ಷೇತ್ರದಿಂದ ಸುಪ್ರಸಿದ್ಧ ಕಾಂಗ್ರೆಸು ನಾಯಕ ಶ್ರೀ ಎಕ್ ಪಿ ಗೋವಿಂದಗೌಡರು ಸ್ಪರ್ಧಿಸುವರೆಂದು ಗೊತ್ತಾಗಿದೆ ಅವರು ಕಾಂಗ್ರೆಸಿಗೆ ರಾಜೀನಾಮೆ ಇತ್ತಿರುವರು ಕಾಂಗ್ರೆಸಿನಲ್ಲಿ ಸರ್ವಾಧಿಕಾರ ಬೆಳೆಯುತ್ತಿದೆ ಎಂಬುದಾಗಿ ಅವರು ತಿಳಿಸಿದ್ದಾರೆ

ಪೆಸ್ ಅನಿವಾರ್ಯದಿಂದ ನಿನ್ನೆ ಪತ್ರಿಕೆ ಪ್ರಕಟವಾಗಲಿಲ್ಲ


ಅಪೆರಾ ☰ ಯಶಸ್ವಿ 4 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವಜ್ರಮುನಿ, ಹರಿಣಿ, ನರಸಿಂಹರಾಜು

ಕಾಂತಾ ರಾವ್, ರಾಜನಾಳ [ ದಿನವಹಿ 3 ಆಟಗಳು ]

ವುಡ್‌ಲ್ಯಾಂಡ್ಸ್ ಮಹೋನ್ನತ 7ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಅಶಾ ಪರೇಖ್ ಮತ್ತಿರ ಪ್ರಖ್ಯಾತ ತಾರೆಯರು ನಾಶ್ರವಹಿಸಿರುವ

ಅತ್ಯಂತ ಮನರಂಜನ ಹಿಂದಿ ಚಿತ್ರ. [ ದಿನವಹಿ 3 ಪ್ರದರ್ಶನಗಳು

SHAKTI

SUDHA

A Superb Tonic

Help ' The Gorakshana '

ಗೋರಕ್ಷಣ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ

ಗೋರಕ್ಷಣ ಪತ್ರಿಕೆಗೆ ಸಹಾಯಧ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು 4

Our Bangalore Sales Depot address—
71 / 4 Arcot Sreenivasachar St., Bangalore 2.


Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.